ಸಮಸ್ಯೆಯಾಗಿದೆ ಸಂಬಂಧಪಟ್ಟ ಅಧಿಕಾರಿಯವರನ್ನು ಕೇಳಿದರೆ ಮುಖ್ಯ ಇಂಜಿನಿಯರ್‌ರವನ್ನು ನೋಡಿ ಎಂದು ಹೇಳುತ್ತಾರೆ, ಮುಖ್ಯ ಇಂಜಿನಿಯರ್‌ರವರನ್ನು ಕೇಳಿದರೆ ಟೆಕ್ನಿಕಲ್ ಡೈರೆಕ್ಟರ್‌ನ್ನು ನೋಡಿ ಎಂದು ಹೇಳುತ್ತಾರೆ, ಅವರನ್ನು ಕೇಳಿದರೆ ಮೆನೇಜಿಂಗ್ ಡೈರೆಕ್ಟರ್‌ನ್ನು ನೋಡಿ ಎಂದು ಹೇಳುತ್ತಾರೆ ಹೀಗಾಗಿ 20 ರಿಂದ 25 ದಿವಸಗಳಾದರೂ ಟ್ರಾನ್ಸ್‌ಫಾರ್ಮರ್‌ಗಳ ವ್ಯವಸ್ಥೆ ಏನಿದೆ ಅದನ್ನು ಸರಿಯಾಗಿ ಒದಗಿಸುತ್ತಿಲ್ಲ ಇದು ಮಾನ್ಯ ಎಂ ಪಿ ಪ್ರಕಾಶ್‌ರವರಿಗೂ ಅನುಭವ ಬಂದಿದೆ ಮಾಗಡಿ ತಾಲ್ಲೂಕಿನ ಶಾಸಕರು ಗೌರಿಬಿದನೂರಿನ ಶಾಸಕರು ಮತ್ತು ಚಿಕ್ಕಬಳ್ಳಾಪುರದ ಶಾಸಕರು ನಮಗೆಲ್ಲಾ ಅನುಭವವಾಗಿದೆ ಇದನ್ನು ಕೇವಲ ಒಂದು ಏಜನ್ಸಿಗೆ ಕೊಟ್ಟು ಅವರು ತೆಗೆದುಕೊಳ್ಳದೆ ಇರುವುದರಿಂದ ಅವರು ಬಿಟ್ಟಿದ್ದರಿಂದ ಈ ವ್ಯವಸ್ಥೆ ಅವ್ಯವಸ್ಥೆಯಾಗಿದೆ ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಸಂಭವವಿರುವುದರಿಂದ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ, ಸಾಧ್ಯವಾದಷ್ಟು ಬೇಗ ಈ ವ್ಯವಸ್ಥೆಯನ್ನು ಸರಿಮಾಡಬೇಕೆಂದು ಮತ್ತೊಮ್ಮೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಇಂಧನ ಸಚಿವರಾದಂಥ ಮಾನ್ಯ ರೇವಣ್ಣನವರು ಎರಡು ಬಾರಿ ಸಭೆಯನ್ನು ಕರೆದಿದ್ದಾರೆ ನೀವು ಹೇಳಿದಂತೆ 230 ಕೋಟಿ ರೂಪಾಯಿಗಳಿಗೆ ಒಂದು ಗುತ್ತಿಗೆ ಕಂಪನಿಗೆ ಕೊಟ್ಟಂಥದ್ದು ಕೂಡ ಈ ಅವವಸ್ಥೆಗೆ ಕಾರಣವಾಗಿದೆ ಇಲ್ಲಿ ಅನೇಕ ಕಡೆ ಟ್ರಾನ್ಸ್‌ಫಾರ್ಮರ್‌ನ ಚಿಕ್ಕ ಚಿಕ್ಕ ಕಲ್ಲುಗಳನ್ನು ಹಾಕಿ ಆ ಎಣ್ಣೆ ಮೇಲೆ ಬರುವಂಥ ರೀತಿಯಲ್ಲಿ ನೋಡಿ ಆ ಎಣ್ಣೆಯನ್ನು ಸಂಗ್ಪ ಮಾಡಿ ಬೆಂಗಳೂರು ಹೈದ್ರಾಬಾದ್ ನಗರಗಳಿಗೆ ಕಳುಹಿಸಿಕೊಡತಕ್ಕದ್ದು ಇದೆ ಈ ಟ್ರಾನ್ಸ್‌ಫಾರ್ಮರ್‌ಗಳನ್ನು ನಾವು ದುರಸ್ತಿ ಮಾಡುವಾಗ ಕಳುಹಿಸಿಕೊಡಬೇಕಾಗಿದ್ದರೆ ಸಂಬಂಧಪಟ್ಟ ಇಂಜಿನಿಯರ್‌ರವರು ಆ ಎಣ್ಣೆಯನ್ನು ತೆಗೆದುಕೊಂಡು ಇಟ್ಟುಕೊಂಡು ಅದರ ಬಗ್ಗೆ ಬರೆಯಬೇಕಾಗುತ್ತದೆ, they have to surrender that oil ಆದರೆ ಆ ಕೆಲಸವನ್ನು ಅನೇಕ ಕಡೆ ಮಾಡಿಲ್ಲ ಇದರಿಂದ ದುರಸ್ಥಿ ಮಾಡಿರತಕ್ಕವರೂ ಕೂಡ ಇದರ ಬಗ್ಗೆ ನೀವು ಎಣ್ಣೆಯನ್ನು ನಾನು ಕೊಡು ಎಂದರೆ ಕೊಡಲು ಆಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಾರೆ ಈ ಟ್ರಾನ್ಸ್‌ಫಾರ್ಮರ್ ಎಣ್ಣೆ ಬಹಳ ದುಬಾರಿಯಾಗಿರುವುದರಿಂದ ಈ ಕಾಳಸಂತೆ ವ್ಯಾಪ್ರ ನಡೆಯುತ್ತಿದೆ ಈ ಕಾರಣಕ್ಕಾಗಿ ನಾವು ರೈತರ ಕ್ಷಮೆಯನ್ನು ಕೇಳುತ್ತಿದ್ದೇವೆ ಈ ಸರ್ಕಾರ ಇದರ ಬಗ್ಗೆ ತೀವ್ರವಾದಂಥ ಗಮನ ಕೊಟ್ಟಿದೆ ಈಗಾಗಲೇ ಎರಡುಮೂರು ಸಭೆಗಳೂ ಸಹ ಆಗಿವೆ ಮಾನ್ಯ ಇಂಧನ ಸಚಿವರ ಈ ಒಂದು ತಿಂಗಳೊಳಗಾಗಿ ಈ ಎಲ್ಲಾ ಏನು ಕಷ್ಟ ಇದೆ ಇದನ್ನು ಪರಿಹಾರಿಸತಕ್ಕದ್ದು ಮತ್ತು ದುರಸ್ಥಿ ಮಾಡಿ ಉತ್ತಮ ಗುಣಮಟ್ಟದ ಟ್ರಾನ್ಸ್‌ಫಾರ್ಮರ್‌ಗಳನ್ನೂ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ ನಿಮಗೆ ಈಗಾಗಲೇ ಗೊತ್ತಿರುವಂತೆ ಕೆಲವು ಕಾರ್ಯಕ್ರಮಗಳೂ ಕೂಡ ಇದೆ ಖಾಸಗಿಯಾಗಿ ಯಾರಾದರೂ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಳ್ಳುವುದಾಗಿದ್ದಾರೆ ಅದನ್ನು 14 ಸಾವಿರ ರೂಪಾಯಿಗಳಿಂದ ಹಿಡಿದು 35 ಸಾವಿರ ರೂಪಾಯಿಗಳವರೆಗೆ ಇರತಕ್ಕ ಬೆಲೆಗೆ ಆ ಕೆವಿ ಮೇಲೆ ಆಧಾರಿತವಾಗಿ ತೆಗೆದುಕೊಳ್ಳತಕ್ಕದ್ದು ಸಹ ಇದೆ ಇದರಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡುತ್ತೇವೆ ಅನಂತರ ರೈತರ ಪಂಪುಸೆಟ್ಟುಗಳಿಗೆ ಆದ್ಯತೆಯನ್ನು ಕೊಡುತ್ತೇವೆ ತಾವು ಹೇಳಿದ ಮಾತು ಅಕ್ಷರಶಃ ಸತ್ಯ ಇದರ ಬಗ್ಗೆ ಸರ್ಕಾರ ಖಂಡಿತವಾಗಿ ಕ್ರಮ ಕೈಗೊಳ್ಳುತ್ತದೆ

ವಿಷಯ (ಛ) ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಆಶ್ರಯ ಹಾಗೂ ಅಂಬೇಡ್ಕರ್ ಮನೆಗಳ ಹಂಚಿಕೆ

ಶ್ರೀ ರೇವು ನಾಯಕ ಬೆಳಮಗಿ (ಕಮಲಾಪುರ) ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ನನ್ನ ಕಲಾಲಾಪುರ ಮೀಸಲು ಕ್ಷೇತ್ರ ಮೀಸಲು ಕ್ಷೇತ್ರ ಅಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ಮತ್ತು ನವ ನವ ನಿರ್ಮಾಣ ಎಂದು ಫಲಾನುಭವಿಗಳಿಗೆ ಆಶ್ರಯ ಕಮಿಟಿ ಸದಸ್ಯರು ಮತ್ತು ನಾವು ಕೂಡಿ ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಿದ್ದೆವು ಆಯ್ಕೆ ಮಾಡಿದ ಅದರ ಪ್ರೊಸೀಡಿಂಗ್ಸ್ ಮಾಡಿ ಸರ್ಕಾರಕ್ಕೆ ಕಳುಹಿಸಬೇಕೆಂದು ಮನವಿ ಮಾಡಿದೆವು ಆದರೂ ಅಧಿಕಾರಿಗಳು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದಾರೋ ಇಲ್ಲವೋ ಗೊತ್ತಿಲ್ಲ ಅಲ್ಲಿ ಮನೆಗಳು ಆಗಿಲ್ಲವೆಂದು ಹೇಳುತ್ತಿದ್ದಾರೆ ಇದು ಬಡವರ ಮನೆ ಹೆಚ್ಚುವರಿ ಮನೆಯನ್ನು ಕೇಳುತ್ತಿಲ್ಲ ಈ ಮೀಸಲು ಕ್ಷೇತ್ರಕ್ಕೆ ಹೆಚ್ಚಿನ ಮನೆಯನ್ನು ಕೊಡಬೇಕಾದುದು ಸರ್ಕಾರದ ಅದ್ಯ ಕರ್ತವ್ಯವೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ ಅದರಲ್ಲಿ ನನ್ನ ಕ್ಷೇತ್ರದಲ್ಲಿ 206 ಆಶ್ರಯ ಮನೆ, 56 ಅಂಬೇಡ್ಕರ್ ಮನೆ, 103 ನವ ನಿರ್ಮಾಣ ಮನೆಗಳು ಇವೆಲ್ಲದರ ಬಗ್ಗೆ ನಾವು ಪ್ರೊಸೀಡಿಂಗ್ ಮಾಡಿ ಆಶ್ರಯ ಕಮಿಟಿ ಸದಸ್ಯರು ನಾವು ಎಲ್ಲರೂ ಕೂಡಿ ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳಿಸಬೇಕೆಂದು ಕೊಟ್ಟಿದ್ದೆವು, ಚುನಾವಣೆ ಮೂವ್‌ಮೆಂಟ್‌ನಲ್ಲಿ ಅದೇ ಗುಲ್ಬರ್ಗಾ ತಾಲ್ಲುಕಿನದ್ದು ಆಗಿದೆ, ಆದರೆ ಆಳಂದ ತಾಲ್ಲೂಕಿನದ್ದು ಆಗಿಲ್ಲ ನನಗೆ ಆಳಂದ ತಾಲ್ಲೂಕಿನ ಅರ್ಧ ಭಾಗ ಗುಲ್ಬರ್ಗಾ ತಾಲ್ಲೂಕಿನ ಅರ್ಧ ಭಾಗ ಬರುತ್ತದೆ ಗುಲ್ಬರ್ಗಾ ತಾಲ್ಲೂಕಿನವರು ಕಳಿಸಿದ್ದಾರೆ, ಅದು ಅಪ್ರೂವ್ ಆಗಿ ಕೆಲಸ ಪ್ರಾರಂಭವಾಗಿದೆ

ಆದರೆ ನನ್ನ ಆಳಂದ ತಾಲ್ಲೂಕಿನ ನನ್ನ ಕ್ಷೇತ್ರದ್ದು ಮಾತ್ರ ಕಳಿಸಿಲ್ಲ ಆದ್ದರಿಂದ ಈ ಬಡವರಿಗೆ ಮನೆಗಳನ್ನು ನೀವು ಮಂಜೂರು ಮಾಡಿ ಮುಂದುವರೆಸಬೇಕೆಂದು ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ ಇದರ ಜತೆಯಲ್ಲಿ ಸರ್ಕಾರ ಮೂವತ್ತನೇ ತಾರೀಖಿನೊಳಗೆ ರಿಜಿಸ್ಟ್ರೇಶನ್ ಮಾಡಬೇಕೆಂದು ಆದೇಶ ಮಾಡಿದ್ದಾರೆ ದಯವಿಟ್ಟು ಈ ಕಾಲಮಿತಿಯನ್ನು ಮಂದೂಡಬೇಕು ಕನಿಷ್ಟ ಪಕ್ಷ ಮುಂದಿನ ತಿಂಗಳು ಹತ್ತನೇ ತಾರೀಖಿನವರೆಗಾದರೂ ಕಾಲಾವಕಾಶವನ್ನು ಕೊಟ್ಟರೆ ಎಲ್ಲಾ ಫಲಾನುಭವಿಗಳಿಗೆ ರಿಜಿಸ್ಟ್ರೇಶನ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಮನ ಮಾಡಿಕೊಳ್ಳುತ್ತೇನೆ ಇದರ ಜತೆಗೆ ಬಡವರು ಎಲ್ಲೆಲ್ಲಿ ಸ್ವತಃ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ ಅವರು ಚೆಕ್ ಸಲುವಾಗಿ ಓಡಾಡುತ್ತಿದ್ದಾರೆ ಅದರ ಬಗ್ಗೆ ನೀವು ಡೈರೆಕ್ಷನ್ ಕೊಟ್ಟು ಇಂತಹ ಬಡ ಫಲಾನುಭವಿಗಳಿಗೆ ಚೆಕ್ ಮುಖಾಂತರ ಹಣ ಪಡೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾಣು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ ಇದರ ಜತೆಯಲ್ಲಿ ಈ ಗಂಗಾಕಲ್ಯಾನ ಬಾವಿಗಳ ಬಗ್ಗೆ ಹೇಳಬೇಕು ಇದನ್ನು ಎಸ್‌ಸಿ ಎಸ್‌ಟಿ ಕಾರ್ಪೊರೇಷನ್‌ನಿಂದ ಸರ್ಕಾರದವರು ಕಟ್ಟಿಸಿಕೊಟ್ಟಿದ್ದಾರೆ ಅವರೆಲ್ಲರೂ ಬಡವರು ಆಗಿರುವುದರಿಂದ ಅರವತ್ತೈದು ಸಾವಿರ ರೂ ಏನು ಲಿಮಿಟ್ ಇದೆ ಅದನ್ನು ಒಂದು ಲಕ್ಷಕ್ಕಾದರೂ ಏರಿಸಬೇಕು ಅದಕ್ಕೆ ಕರೆಂಟ್ ತೆಗೆದುಕೊಳ್ಳಬೇಕೆಂದರೆ, ಪೈಪ್‌ಲೈನ್, ಮೋಟಾರ್ ಕೂಡಿಸಬೇಕಾದರೆ ಹೆಚ್ಚಿನ ಹಣ ತುಂಬಬೇಕೆಂದು ಹೇಳಿದಾಗ, ಅದು ಅವರ ಕೈಯಲ್ಲಿ ಸಾಧ್ಯವಾಗುವುದಿಲ್ಲ ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ ಆ ಫಲಾನುಭವಿಗಳಿಗೆ, ದಲಿತ ಜನರಿಗೆ ನೀವು ಹೆಚ್ಚಿನ ಹಣಕಾಸು ಕೊಟ್ಟು ಅದನ್ನು ನೀವೇ ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಸಂಸದೀಯ ವ್ಯವಹಾರಗಳು ಮತ್ತು ಕಂದಾಯ ಮಂತ್ರಿ) ಮಾನ್ಯ ಶಾಸಕರ ಎಲ್ಲಾ ಸಲಹೆಗಳನ್ನು ನಾನು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ